## ಲಾಕ್-ಡೌನ್ನಿಂದ ಪುನರಾರಂಭದ ತನಕ – ವರ್ಕ್ಶೀಟ್ ಈಗಲೂ ಪರಿಣಾಮಕಾರಿ

ಲೋವಿಸ್ ಸಿಮನ್

"*ದೀದಿ, 'ಈ ಕೇಂದ್ರ ಯಾವಾಗ ಪುನರಾರಂಭವಾಗುತ್ತದೆ?'* ಎಂದು ಮೂರು ನಾಲ್ಕು ಮಂದಿ ಮಕ್ಕಳು ಭೋಪಾಲ್ನ ಗುಂಗಾ ಗ್ರಾಮದ ಬೆರೇಸಿಯಾ ಬ್ಲಾಕ್ನಲ್ಲಿರುವ *ಮೊಹಲ್ಲಾ ಕಲಿಕಾ ಚಟುವಟಿಕೆ ಕೇಂದ್ರ (ಎಂ-ಎಲ್ಎಸಿ)*ದ ಸಂಚಾಲಕರನ್ನು (ಸಮುದಾಯ ಆರಿಸಿದ ಸುಗಮಕಾರ) ಕೇಳುತ್ತಿದ್ದರು. ಇದು ಏಕಲವ್ಯ ಯೋಜನೆಯ *ಶಿಕ್ಷಾ ಕಿ ಉಡಾನ್*ನ ಒಂದು ಭಾಗವಾಗಿತ್ತು. ಇದರ ಮೂಲಕ ನಾವು ಸಂಚಾಲಕರೊಂದಿಗೆ ಮನೆಮನೆಗೆ ಹೋಗಿ ಮಕ್ಕಳಿಗೆ ವರ್ಕ್ಶೀಟ್ಗಳನ್ನು ವಿತರಣೆ ಮಾಡುತ್ತಿದ್ದೆವು. ಇಂತಹ ಕಾರ್ಯಕ್ರಮವನ್ನು ನಾವು ಹಿಂದೆಂದೂ ನಿರ್ವಹಿಸಿರಲಿಲ್ಲ. ಅದು ಜೂನ್ ತಿಂಗಳು; ಆ ಹೊತ್ತಿಗೆ ಎರಡು ತಿಂಗಳುಗಳ ಲಾಕ್ಡೌನ್ ಮುಗಿದು ಹೋಗಿತ್ತು ಮತ್ತು *ರಾಜ್ಯ ಶಿಕ್ಷಾ ಕೇಂದ್ರ*ದಿಂದ ಯಾವುದೇ ಪ್ರಕಟಣೆಯನ್ನು ಕೂಡ ಹೊರಡಿಸಲಾಗಿರಲಿಲ್ಲ. ನಮ್ಮ ತಂಡದ ಸದಸ್ಯರಲ್ಲಿ ಕಳವಳ ಮನೆ ಮಾಡಿತ್ತು. ನಮ್ಮ ಎಂ-ಎಲ್ಎಸಿಗಳಲ್ಲಿ ಮಕ್ಕಳನ್ನು ಸೇರಿಸುವ ಬಗ್ಗೆ ನಮಗೆ ಇಷ್ಟವಿರಲಿಲ್ಲ. ಹಾಗಾಗಿ ನಾವು ಈ *ಸಂಚಾಲಕರ* ಮೂಲಕ ಮನೆಮನೆಗೆ ಭೇಟಿ ನೀಡಿ ಮಕ್ಕಳೊಂದಿಗೆ ನೇರವಾಗಿ ಮಾತನಾಡುವ ಪ್ರಯತ್ನ ಮಾಡುತ್ತಿದ್ದೆವು. ನಾವು ಮೂರು ಕಲಿಕಾ ಹಂತಗಳಿಗಾಗಿ ಈ ವರ್ಕ್ಶೀಟ್ಗಳನ್ನು ಸಿದ್ಧಪಡಿಸಿದ್ದೆವು- ಅವುಗಳೆಂದರೆ *ಅಂಕುರ್*(ಅಂಕುರಿಸುವ), *ತರುಣ್*(ಮಾಧ್ಯಮಿಕ) ಮತ್ತು *ಉಮಂಗ್* (ಉನ್ನತ).

ನಮ್ಮ ದಿನನಿತ್ಯದ ಗಡಿಬಿಡಿಯ ಬದುಕಿನಲ್ಲಿ ಕೋವಿಡ್-19 ಸಾಂಕ್ರಾಮಿಕವು ಒಂದು ರೀತಿಯಲ್ಲಿ 'ವಿರಾಮ'ದ ಗುಂಡಿಯನ್ನು ಒತ್ತಿದಂತಾಗಿದೆ. ಇದರಿಂದಾಗಿ ನಮ್ಮ ಇಡೀ ಸಾಮಾಜಿಕ ಬದುಕಿನ ಎಲ್ಲ ಅಂಶಗಳನ್ನೂ ಮರುಹೊಂದಾಣಿಕೆ ಮಾಡಿಕೊಳ್ಳಬೇಕಾದ ಅಗತ್ಯ ನಿರ್ಮಾಣವಾಗಿದೆ. ಹೀಗೆ ಇನ್ನೊಂದು ಶಾಲಾ ಶೈಕ್ಷಣಿಕ ವರ್ಷ ಕಳೆದುಹೋಯಿತು, ಮುಖ್ಯವಾಗಿ ತಂತ್ರಜ್ಞಾನದ ಸಂಪರ್ಕವೇ ಇಲ್ಲದ ಮಕ್ಕಳಿಗೆ ಈ ಅವಧಿ ಅತ್ಯಂತ ಕಷ್ಟದಾಯಕವಾಗಿತ್ತು. ಈ ಕಾರಣದಿಂದಾಗಿ ಕೆಲವು ಸಿದ್ಧ ಚಟುವಟಿಕೆಗಳೊಂದಿಗೆ ಮುಖಾಮುಖಿ ಸಂವಹನ ನಡೆಸುವುದು ಎಷ್ಟು ಅವಶ್ಯವಿದೆ ಎಂಬುದನ್ನು ನಾವು ಅರ್ಥ ಮಾಡಿಕೊಂಡೆವು. ಮನುಷ್ಯ ಮನುಷ್ಯರ ನಡುವಿನ ಸಂವಹನದ ಕೊರತೆಯಿಂದಾಗಿ ಅದರಲ್ಲೂ ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಮಕ್ಕಳ ಪಾಲಿಗೆ ದೊಡ್ಡ ನಷ್ಟಕ್ಕೆ ಕಾರಣವಾಯಿತು. ಕೇವಲ ಶೈಕ್ಷಣಿಕವಾಗಿ ಮಾತ್ರವಲ್ಲ ಸಾಮಾಜಿಕವಾಗಿಯೂ ಮತ್ತು ಭಾವನಾತ್ಮಕವಾಗಿಯೂ ದೊಡ್ಡ ನಷ್ಟವದು. ಶಾಲೆಗಳಿಂದಾಗಿ ಅವರು ಒಬ್ಬರಿಗೊಬ್ಬರು ಜಗಳ ಕಾಯುತ್ತಿದ್ದರು, ಗೆಳೆಯರನ್ನಾಗಿ ಮಾಡಿಕೊಳ್ಳುತ್ತಿದ್ದರು ಮತ್ತು ಪರಸ್ಪರ ವಾದ ಮಾಡುತ್ತಿದ್ದರು, ಆಟವಾಡುತ್ತಿದ್ದರು ಹಾಗು ಇನ್ನೂ ಅನೇಕ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಈ ಎಲ್ಲ 'ಸಾಮಾಜಿಕ ಸಂವಹನ'ವನ್ನು ಕೋವಿಡ್ ಎಂಬ ಸಾಂಕ್ರಾಮಿಕ ಜಾಢ್ಯ ಕಸಿದುಕೊಂಡುಬಿಟ್ಟಿತು. ಪ್ರತಿಯೊಂದು ಮಗುವಿನ ಬಲವೇನು ಮತ್ತು ದೌರ್ಬಲ್ಯವೇನು ಎಂಬುದನ್ನು ಕಣ್ಣಾರೆ ಕಾಣುವ ಅವಕಾಶಗಳನ್ನು ಪಡೆಯುತ್ತಿದ್ದ ಶಿಕ್ಷಕರು ಕಲಿಕೆ-ಬೋಧನಾ ಪ್ರಕ್ರಿಯೆಯನ್ನು ಚಾಲ್ತಿಯಲ್ಲಿಡಲು ಅತ್ಯಂತ ಭಿನ್ನವಾದ ವಿಧಾನಕ್ರಮವನ್ನು ಅನುಸರಿಸಬೇಕಾದ ಅನಿವಾರ್ಯತೆಯನ್ನು ನಿರ್ಮಿಸಿತು.

ಇಂತಹುದೊಂದು ವಿಧಾನಕ್ರಮದ ಪ್ರಯತ್ನ ನಡೆದಿದ್ದು ವರ್ಕ್ಶೀಟ್ಗಳ ಮೂಲಕ. ಈ ಮಾದರಿಯ ಮೂಲಕ ಶಿಕ್ಷಕರು ಮಕ್ಕಳ ಕಲಿಕಾ ಮಟ್ಟಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಬಹುದು.

ಈಗ ನಾವು ಇಂತಹ ಒಂದು ಪ್ರಯತ್ನವನ್ನು ಮಕ್ಕಳ ಕಲಿಕಾ ಅಂತರಗಳನ್ನು ಅರ್ಥ ಮಾಡಿಕೊಳ್ಳಲು ಹಾಗು ಶಾಲೆಗಳು ಪುನರಾರಂಭವಾದಾಗ ಸಿದ್ಧತೆಗಳನ್ನು ಮಾಡಿಕೊಳ್ಳುವ ನಿಟ್ಟಿನಲ್ಲಿ ನೋಡುತ್ತಿದ್ದೇವೆ. ಕೋವಿಡ್-19 ನಮ್ಮನ್ನು ತೀವ್ರ ಸ್ವರೂಪದಲ್ಲಿ ಕಾಡಿದ್ದು ನಿಜವಾದರೂ ಕೂಡ ನಮ್ಮ ಬದುಕಿನ ದಿನಚರಿಯನ್ನು ಮತ್ತೊಮ್ಮೆ ಹಿಂದಿರುಗಿ ನೋಡುವಂತೆ ಮಾಡಿದೆ. ಈ ಹಿಂದೆ ತಮ್ಮ ಕೆಲಸಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಿದ್ದ ಅನೇಕ ಮಂದಿ ಪಾಲಕರು ಲಾಕ್ಡೌನ್ ಸಂದರ್ಭದಲ್ಲಿ ಮಕ್ಕಳೊಂದಿಗೆ ಸಾಕಷ್ಟು ಸಮಯವನ್ನು ಕಳೆಯಲು ಸಾಧ್ಯವಾಯಿತು. ಇದರ ಜೊತೆಗೆ ಶಿಕ್ಷಕರಿಗೂ ಕೂಡ ಮಕ್ಕಳೊಂದಿಗೆ ಕೆಲಸ ಮಾಡಲು ಯಾವ ರೀತಿ ಕಾರ್ಯತಂತ್ರವನ್ನು ರೂಪಿಸಬೇಕು ಎಂದು ಚಿಂತಿಸಲು ಸ್ವಲ್ಪ ಕಾಲಾವಕಾಶ ಸಿಕ್ಕಿತು. ಪಠ್ಯಪುಸ್ತಕದ ಪಾಠಗಳನ್ನು ಪೂರ್ಣಗೊಳಿಸುವ ಬಗ್ಗೆ ಅವರು ನಿರಂತರವಾಗಿ ಚಿಂತೆ ಮಾಡುತ್ತ ಕುಳಿತಿದ್ದರೆ ಅದು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಈ ಕಾಲವಕಾಶ ಹೊಸದನ್ನು, ಭಿನ್ನವಾದುದನ್ನು ಪ್ರಯತ್ನ ಮಾಡಲು ಅವರಿಗೆ ಅವಕಾಶವನ್ನು ನೀಡಿತು.

ಕೋವಿಡ್-19 ಅಷ್ಟು ಬೇಗ ನಮ್ಮನ್ನು ಬಿಟ್ಟು ಹೋಗುವುದಿಲ್ಲ ಎಂಬುದು ನಮಗೆ ಅರಿವಾಗಿತ್ತು. ಹಾಗಾಗಿ ಈ 'ವರ್ಕ್-ಶೀಟ್' ಮಾದರಿ ಶಾಲೆಗಳು ಮತ್ತು ಮನೆಯಲ್ಲಿಯೂ ಸಮಗ್ರತೆಯನ್ನು ಸಾಧಿಸಲು ಅನುಕೂಲವಾಗುವ ಬಗ್ಗೆ ಅನುಮಾನವಿರಲಿಲ್ಲ. ನಮ್ಮ ಈ ಪ್ರಯತ್ನದ ಬಗ್ಗೆ ಶಿಕ್ಷಕರೊಂದಿಗೆ ಮಾತುಕತೆ ನಡೆಸುವುದು ಮುಖ್ಯವಾಗಿತ್ತು. ಇದು ಶಾಲೆಗಳು ಪುನರಾರಂಭವಾಗುವುದಕ್ಕೆ ಬೇಕಾದ ನಮ್ಮ ಸಿದ್ಧತೆಗೆ ಅಗತ್ಯವಾಗಿತ್ತು ಕೂಡ. ಶಾಲೆಗಳು ಪುನರಾರಂಭವಾದರೆ ನಾವು ಇನ್ನಷ್ಟು ಸುಲಭವಾದ ವಿಧಾನಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿತ್ತು.

ಮಕ್ಕಳು ವಿಭಿನ್ನವಾದ ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದವರು ಎಂಬುದನ್ನು ಕೋವಿಡ್-19 ಬಯಲು ಮಾಡಿತು. ಉದಾಹರಣೆಗೆ ನಗರ ಪ್ರದೇಶದ ಮಧ್ಯಮವರ್ಗದ ಹಿನ್ನೆಲೆಯಿಂದ ಬಂದ ಮಗುವಿಗೆ ಹೆಚ್ಚಿನ ಕೌಶಲ್ಯದ ಬೆಂಬಲವಿರುತ್ತದೆ. ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂಬಂಧ, ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವ ಕೌಶಲ್ಯ, ಸೃಜನಾತ್ಮಕವಾದ ಯೋಚನೆ, ಕುಟುಂಬದಿಂದ ಬೆಂಬಲ ಮತ್ತು ತಂತ್ರಜ್ಞಾನದ ಲಭ್ಯತೆಯಂತಹ ಸೌಲಭ್ಯಗಳು ಆ ಮಕ್ಕಳಿಗೆ ಸಿಕ್ಕಿರುತ್ತವೆ. ಆದರೆ ದಿನಗೂಲಿ ಕೆಲಸದಲ್ಲಿ ಅಥವಾ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಕುಟುಂಬದಿಂದ ಬಂದಿರುವ ಮಗುವಿಗೆ (ಬೆರಾಸಿಯಾ ಬ್ಲಾಕ್‌ನಂತೆ) ಜೀವನದ ಕೌಶಲಗಳು ಗೊತ್ತಿದ್ದರೂ ಕೂಡ ಅದೇ ರೀತಿಯ ಸಾಮಾಜಿಕ-ಸಾಂಸ್ಕೃತಿಕ ಬೆಂಬಲ ಇರುವುದಿಲ್ಲ. ಎಂ-ಎಲ್‌ಎಸಿಗಳಲ್ಲಿ ವರ್ಕ್ಶೀಟ್ಗಳನ್ನು ಬಳಸಿಕೊಳ್ಳುವುದರಿಂದ ಮಕ್ಕಳು ಇಂತಹ ಕೌಶಲಗಳನ್ನು ಪಡೆದುಕೊಳ್ಳಲು ಸಹಾಯವಾಗುತ್ತದೆ.

## ಪುನರಾರಂಭಕ್ಕೆ ಯೋಜನೆ

ಲಾಕ್ಡೌನ್ ಸಂದರ್ಭದಲ್ಲಿ ಕಲಿಕೆಯ ಬಲವರ್ಧನೆಗೆ ಸಹಕಾರಿಯಾದ ವರ್ಕ್ಶೀಟ್‌ಗಳನ್ನು ಬಳಕೆ ಮಾಡಿರುವುದರಿಂದ ಮಕ್ಕಳ ಕಲಿಕೆಯಲ್ಲಿ ಇದು ಅತ್ಯಂತ ಪರಿಣಾಮಕಾರಿ ವಿಧಾನ ಎಂಬುದು ನಮ್ಮ ಅರಿವಿಗೆ ಬಂದಿತ್ತು. ಈ ವರ್ಕ್ಶೀಟ್ನ ವಿನೂತನ ಪ್ರಯತ್ನದಿಂದಾಗಿ ಪಾಲಕರು ಕೂಡ ಮಕ್ಕಳ ಕಲಿಕೆಯೊಂದಿಗೆ ತೊಡಗಿಕೊಳ್ಳುವಂತೆ ಮಾಡಿತು. ಈಗಾಗಲೇ ಪ್ರಸ್ತಾಪಿಸಿರುವಂತೆ ಮಕ್ಕಳು ತಮ್ಮ ಕಲಿಕಾ ಅವಧಿಯ ಬಹಳಷ್ಟು ಸಮಯವನ್ನು ಕಳೆದುಕೊಂಡಿದ್ದಾರೆ ಮತ್ತು ಅವರ ಕಲಿಕಾ ಮಟ್ಟಗಳಲ್ಲಿ ಯಾವ ಬದಲಾವಣೆಗಳಾಗಿವೆ ಎಂಬುದು ಶಿಕ್ಷಕರಿಗೆ ಕೂಡ ತಿಳಿದಿಲ್ಲ. ಸಣ್ಣಸಣ್ಣ ಗುಂಪುಗಳಲ್ಲಿ ಕೆಲಸ ಮಾಡುವ ಮತ್ತು ಒಬ್ಬರಿಗೊಬ್ಬರು ಪರಸ್ಪರ ಬೆಂಬಲ ನೀಡುವ ಮೂಲಕ ಇಲ್ಲಿ ಪ್ರಸ್ತಾಪ ಮಾಡಿರುವ ನಾನಾ ಹಂತಗಳ ವರ್ಕ್ಶೀಟ್‌ಗಳು ಮಕ್ಕಳಿಗೆ ಸಹಕಾರಿಯಾಗಬಹುದು. ಶಿಕ್ಷಕರು ಈ ವರ್ಕ್ಶೀಟ್‌ಗಳನ್ನು ಬಳಸಿಕೊಂಡು ಹಿಂದಿನ ತರಗತಿಗಳಲ್ಲಿ ಮಕ್ಕಳು ಕಲಿತದ್ದನ್ನು ಕ್ರಮೇಣ ನೆನಪಿಸಿಕೊಳ್ಳುವಂತೆ ಸಹಾಯ ಮಾಡಬಹುದಾಗಿದೆ.

ಸೆ.1ರಂದು ಮಧ್ಯಪ್ರದೇಶದಲ್ಲಿ ಶಾಲೆಗಳು ಪುನರಾರಂಭವಾದಾಗ ಶಿಕ್ಷಕರು ಗುಂಪುಗಳನ್ನಾಗಿ ಮಾಡಿಕೊಂಡು ಮಕ್ಕಳೊಂದಿಗೆ ಕೆಲಸ ಮಾಡಬಹುದಾಗಿದೆ. ಜೊತೆಗೆ ವರ್ಕ್ಶೀಟ್‌ಗಳ ಸಹಾಯದೊಂದಿಗೆ ಮರೆತಿರಬಹುದಾದ ಹಿಂದಿನದನ್ನು ನೆನಪು ಮಾಡಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡಬಹುದಾಗಿದೆ. ಇದರಿಂದ ಮುಂದಿನ ಹಂತದ ಕಲಿಕೆಯ ಬಗ್ಗೆ ಮಕ್ಕಳಲ್ಲಿರುವ ಭಯವನ್ನು ನಿವಾರಣೆ ಮಾಡಲು ಸಹಾಯವಾಗುತ್ತದೆ. ಹಾಗಾಗಿ ವರ್ಕ್ಶೀಟ್‌ಗಳು ಬೋಧನೆ-ಕಲಿಕೆ ಪ್ರಕ್ರಿಯೆಯಲ್ಲಿ ಗಮನಾರ್ಹವಾದ ಉದ್ದೇಶವನ್ನು ಈಡೇರಿಸುವುದು ನಿಶ್ಚಿತ. ಇದರಿಂದ ಮಕ್ಕಳಿಗೆ ಮೌಲ್ಯಮಾಪನ ಸಾಧನದೊಂದಿಗೆ ಅಭ್ಯಾಸ ಮಾಡಲು ಸಾಕಷ್ಟು ಅವಕಾಶಗಳು ಸಿಗುತ್ತವೆ ಹಾಗು ಹೊಸ ಕಲಿಕೆಗೆ ಬದಲಾವಣೆಯನ್ನು ಹೊಂದಲು ಅವರಿಗೆ ಕಷ್ಟವಾಗುವುದಿಲ್ಲ. ಮಕ್ಕಳು ಶಾಲೆಗೆ ಮರಳಿದಾಗ ಅವರಿಗೆ ಕಲಿಕಾ ಪ್ರಕ್ರಿಯೆಯು ಸುಲಭವಾಗಬೇಕು ಎಂಬುದೇ ಪ್ರಧಾನ.

**ಕೆಲವು ಅನುಭವಗಳು**

ಹಿರನ್-ಖೇಡಿ (ಬೆರೇಸಿಯಾ, ಭೋಪಾಲ್) ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ನಾನು ಮಕ್ಕಳೊಂದಿಗೆ ಮಾತನಾಡುತ್ತಾ, ಕಳೆದ ಒಂದೂವರೆ ವರ್ಷದ ಅವಧಿಯ ಬಳಿಕ ಶಾಲೆಗೆ ಮರಳಿ ಬರುತ್ತಿರುವ ಬಗ್ಗೆ ನಿಮಗೆ ಏನನಿಸುತ್ತಿದೆ? ಆ ಅವಧಿಯಲ್ಲಿ ನೀವು ಏನೇನು ಮಾಡಿದಿರಿ? ಎಂದು ಅವರನ್ನು ಕೇಳಿದೆ. ಆಗ ಮಕ್ಕಳು ನೀಡಿದ ಉತ್ತರ ಹೀಗಿತ್ತು: 'ನಾನು ಮನೆಯಲ್ಲಿಯೇ ಇದ್ದೆ ಅಥವಾ ಅಜ್ಜಿ ಮನೆಗೆ ಹೋಗಿದ್ದೆ ಅಥವಾ ಇನ್ಯಾರೋ ಸಂಬಂಧಿಕರ ಮನೆಗೆ ಹೋಗಿದ್ದೆ ಎಂದಿತು. ಒಂದು ಮಗು ನಾನು ಭೋಪಾಲ್ನಲ್ಲಿರುವ ವನವಿಹಾರ ಮತ್ತು ಭೀಮ್ ಬೇತ್ಕಾಗೆ ಕುಟುಂಬದೊಂದಿಗೆ ಭೇಟಿ ನೀಡಿದ್ದೆ ಎಂದು ಹೇಳಿತು. ಆ ಬಳಿಕ ನಾನು, ಇಡೀ ತರಗತಿಯ ಜೊತೆ ಮೊದಲ ಬಾರಿಗೆ ಮಾತುಕತೆ ನಡೆಸುತ್ತಿದ್ದ ಕಾರಣ, ಇಂಗ್ಲಿಷ್ನಲ್ಲಿ ನಮ್ಮನ್ನು ಪರಿಚಯ ಮಾಡಿಕೊಳ್ಳುವುದು ಹೇಗೆ ಎಂಬ ಬಗ್ಗೆ ಮಾತನಾಡಲು ಶುರು ಮಾಡಿದೆವು. ಇದಕ್ಕೆ ತಮ್ಮ ಹೆಸರುಗಳನ್ನು ಒಂದು ತುಂಡು ಕಾಗದದಲ್ಲಿ ಬರೆದು ತೋರಿಸುವಂತೆ ಹೇಳಿದೆ; My name is Lovis, I come from Bhopal. (ನನ್ನ ಹೆಸರು ಲೋವಿಸ್, ನಾನು ಭೋಪಾಲ್ನಿಂದ ಬಂದಿದ್ದೇನೆ). ಮಕ್ಕಳು ಇದೇ ಮಾದರಿಯಲ್ಲಿ ಬರೆಯಲು ಆರಂಭಿಸಿದರು. My name is… I come from Hirankhedi village. (ನನ್ನ ಹೆಸರು… ನಾನು ಹಿರನ್ಖೇಡಿ ಗ್ರಾಮದಿಂದ ಬಂದಿದ್ದೇನೆ. ಹೀಗೆ). ಇದರ ಜೊತೆಗೆ ಅವರು ತಾವು ಇಷ್ಟಪಟ್ಟ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಮಕ್ಕಳು ಮೊದಲ ಅಕ್ಷರ ಮತ್ತು ಆ

ಅಕ್ಷರದ ಧ್ವನಿಯನ್ನು ಗುರುತಿಸುವ ಇನ್ನೊಂದು ಅಭ್ಯಾಸವನ್ನು ಮಾಡುವಂತೆ ತಿಳಿಸಿದೆ. ಪ್ರತಿಯೊಬ್ಬರಿಗೂ ಅನ್ವಯ ಮಾಡಿಕೊಳ್ಳುವ ರೀತಿಯಲ್ಲಿ ಈ ಅಭ್ಯಾಸವನ್ನು ಮಾಡಿದೆವು. ಮಕ್ಕಳು ತಾವು ಇಷ್ಟಪಟ್ಟ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದಂತೆ ನಾನು ಅವುಗಳನ್ನು ಕರಿಹಲಗೆಯಲ್ಲಿ ಬರೆದೆ.

ಹರಖೇಡ (ಬೆರೇಸಿಯಾ, ಭೋಪಾಲ್)ದ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ, 'ಕಳೆದು ಹೋದ ಇಷ್ಟೊಂದು ತಿಂಗಳುಗಳ ಅವಧಿಯಲ್ಲಿ ನೀವು ಏನೇನು ಮಾಡಿದಿರಿ' ಎಂದು ಮಕ್ಕಳನ್ನು ಕೇಳಿದೆ. 'ನಾನು ಮೊಬೈಲ್ನಲ್ಲಿ ಗೇಮ್ ಆಡಿದೆ, ಮನೆಗೆಲಸದಲ್ಲಿ ಸಹಾಯ ಮಾಡಿದೆ ಮತ್ತು ಸ್ನೇಹಿತನೊಂದಿಗೆ ಸೈಕಲ್ನಲ್ಲಿ ತೆರಳಿದೆ' ಎಂದು ಮಕ್ಕಳು ಉತ್ತರಗಳನ್ನು ನೀಡಿದರು. ಆ ಬಳಿಕ ನಾನು ತರಗತಿಯಲ್ಲಿ ಕೆಲವು ಗುಂಪುಗಳನ್ನು ಮಾಡಿ ಚಿತ್ರವನ್ನು ಓದುವ ಅಭ್ಯಾಸವನ್ನು ಮಾಡಿದೆ. ನಾನು ಪ್ರತಿಯೊಂದು ಗುಂಪಿಗೂ ಒಂದು ಚಾರ್ಟ್ ಕಾಗದ ಜೊತೆಗೆ ಒಂದು ಚಿತ್ರಕಥೆಯನ್ನು ನೀಡಿದೆ ಮತ್ತು ಪ್ರತಿಯೊಂದು ಪುಸ್ತಕದಿಂದ ಒಂದು ಚಿತ್ರವನ್ನು ಆಯ್ಕೆ ಮಾಡಿಕೊಂಡು ಅದರ ಬಗ್ಗೆ ಬರೆಯುವಂತೆ ಹೇಳಿದೆ; ಚಿತ್ರದಲ್ಲಿ ಯಾರು/ಯಾರೆಲ್ಲ ಇದ್ದಾರೆ? ಅಲ್ಲಿ ಯಾಕೆ ಏನೋ ನಡೆಯುತ್ತಿದೆ ಮತ್ತು ಅದು ನಡೆಯುತ್ತಿರುವುದು ಎಲ್ಲಿ? ಎಂಬುದನ್ನು ಬರೆಯಲು ತಿಳಿಸಿದೆ. ಪ್ರತಿ ಗುಂಪಿನ ಇಬ್ಬರು ಅದನ್ನು ಇಡೀ ತರಗತಿಗೆ ಪ್ರಸ್ತುತಪಡಿಸಬೇಕಿತ್ತು. ಮೇಲೆ ಪ್ರಸ್ತಾಪಿಸಿದ ಎರಡೂ ಮಾದರಿಗಳು ವರ್ಕ್ಶೀಟ್ ಅಭ್ಯಾಸವಾಗಿದ್ದು ಇದರಲ್ಲಿ ಮಕ್ಕಳು ಯಾವುದೇ ಭಯ ಅಥವಾ ಯಾರಾದರೂ ನಮ್ಮ ಕೆಲಸದ ಬಗ್ಗೆ ತೀರ್ಪನ್ನು ನೀಡುತ್ತಾರೆ ಎಂಬ ಭಾವನೆ ಇಲ್ಲದೆ ಆಲಿಸುವುದು, ಮಾತನಾಡುವುದು ಮತ್ತು ಬರೆಯುವುದರಲ್ಲಿ ತೊಡಗಿಕೊಂಡರು. ಇಂತಹುದೊಂದು ಚಟುವಟಿಕೆಯನ್ನು ಚಿತ್ರವನ್ನು ಬರೆಯುವಂತೆ ಅಥವಾ ತಾವು ಭೇಟಿ ನೀಡಿದ ಸ್ಥಳದ ಬಗ್ಗೆ ಒಂದು ವಾಕ್ಯ ಬರೆಯುವಂತೆ ಅಥವಾ ನಮ್ಮ ಮಾತುಕತೆಯಿಂದ ಇಷ್ಟವಾದ ಐದರಿಂದ ಹತ್ತು ಪದಗಳನ್ನು ಆಯ್ಕೆ ಮಾಡಿಕೊಂಡು ತಮ್ಮ ನೋಟ್ಬುಕ್ ಗಳಲ್ಲಿ ಬರೆಯುವಂತೆಯೂ ಮಕ್ಕಳನ್ನು ಕೇಳಿಕೊಳ್ಳುವ ಮೂಲಕ ಕೂಡ ಮಾಡಬಹುದಾಗಿದೆ. ಮಕ್ಕಳ ಬರವಣಿಗೆಗಳನ್ನು ತರಗತಿಯ ಗೋಡೆಯ ಮೇಲೂ ಕೂಡ ಪ್ರದರ್ಶಿಸಬಹುದು. ಇಂತಹ ಚಟುವಟಿಕೆಗಳ ಮೂಲಕ ಮಕ್ಕಳೊಂದಿಗೆ ಮಾತುಕತೆ ನಡೆಸುವುದು ಮತ್ತು ಅವರು ಕಲಿಕೆಯನ್ನು ಖುಷಿಯಿಂದ ಅನುಭವಿಸುವುದನ್ನು ಖಾತರಿಪಡಿಸಿಕೊಳ್ಳುವುದನ್ನು ಶಿಕ್ಷಕರು ಶಾಲೆ ಪುನರಾರಂಭವಾದಾಗ ಮಾಡಿದರೆ ಕ್ರಮೇಣ ಕಲಿಕೆಯ ತೀವ್ರತೆಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ವರ್ಕ್ಶೀಟ್ ಚಟುವಟಿಕೆಗಳನ್ನು ಕ್ರಮೇಣ ಪಠ್ಯಗಳಿಂದ ಬೋಧನೆ-ಕಲಿಕೆಗೆ ವಿಸ್ತರಿಸಬಹುದಾಗಿದೆ.

**ಕ್ಯಾಪ್ಶನ್**

ಇವಿಎಸ್ ಮತ್ತು ಹಿಂದಿಯನ್ನು ಜೊತೆಗೂಡಿಸುವ ಮೂಲಕ ಸಾಂಕ್ರಾಮಿಕದ ವಿದ್ಯಮಾನಗಳ ಬಗ್ಗೆ ಮಕ್ಕಳು ಯೋಚನೆ ಮಾಡುವ ರೀತಿಯಲ್ಲಿ ಈ ವರ್ಕ್ಶೀಟ್ ವಿನ್ಯಾಸಗೊಳಿಸಲಾಗಿದೆ. ಒಂದು ಅಡುಗೆ ಮನೆಯಲ್ಲಿ ತುರ್ತಾಗಿ ಅಗತ್ಯವಿರುವ ಆರು ವಸ್ತುಗಳ ಚಿತ್ರಗಳನ್ನು ಚಿತ್ರಿಸುವಂತೆ ಮಕ್ಕಳನ್ನು ಕೇಳಲಾಗಿತ್ತು. ತರುಣ್ ಗುಂಪಿಗಾಗಿ ಈ ವರ್ಕ್ಶೀಟನ್ನು ಬಳಸಲಾಗಿತ್ತು.

ಉಮಂಗ್ ಗುಂಪಿಗಾಗಿ ವಿನ್ಯಾಸಗೊಳಿಸಲಾದ ಈ ವರ್ಕ್‌ಶೀಟ್‌ನಲ್ಲಿ ನಮ್ಮ ದಿನನಿತ್ಯದ ಬದುಕಿನಲ್ಲಿ ಅತ್ಯಗತ್ಯ ಕೌಶಲವಾಗಿರುವ ಸಮಯದ ಬಗ್ಗೆ ಹೆಚ್ಚು ಗಮನ ನೀಡಲಾಗಿದೆ.

**ಕೃತಜ್ಞತೆ**

ಈ ಲೇಖನವನ್ನು ಸಿದ್ಧಪಡಿಸಲು ನೆರವಾದ ವರ್ಕ್‌ಶೀಟ್ ಪ್ರಯತ್ನದ ಭಾಗವಾಗಿದ್ದ ಬೇರೆಬೇರೆ ಸಿಯಾದ ಎಲ್ಲ ಸಂಚಾಲಕರು ಹಾಗು ಅರವಿಂದ *ಸಾರ್ದಾನಾ, ಹೃದಯಕಾಂತ್ ದಿವಾನ್* ಮತ್ತು *ತುಲ್-ತುಲ್ ಬಿಸ್ವಾಸ್* ಅವರ ಸಹಾಯಕ್ಕೆ ಈ ಲೇಖನದ ಲೇಖಕರು ಧನ್ಯವಾದ ಹೇಳಲು ಬಯಸಿದ್ದಾರೆ.

**ಅನುಬಂಧಗಳು**

i. ಮೊಹಲ್ಲಾ ಕಲಿಕಾ ಚಟುವಟಿಕೆ ಕೇಂದ್ರ (ಎಂ-ಎಲ್‌ಎಸಿ)ಗಳನ್ನು ತೆರೆದ, ಸಾಕಷ್ಟು ಗಾಳಿ ಬೆಳಕು ಇರುವ ಸ್ಥಳಗಳಲ್ಲಿ ರಚಿಸಲಾಗುತ್ತದೆ. ಇಲ್ಲಿ ಮಕ್ಕಳು, ಅದರಲ್ಲೂ ಮುಖ್ಯವಾಗಿ ನೆರೆಹೊರೆಯ/*ಮೊಹಲ್ಲಾ*ದ ಮಕ್ಕಳು ಬಂದು ಇಂಗ್ಲಿಷ್, ಹಿಂದಿ ಮತ್ತು ಕಲಿಯಬಹುದಾಗಿದೆ. ಅಗತ್ಯವಿರುವ ಎಲ್ಲ ಸುರಕ್ಷತಾ ಶಿಷ್ಟಾಚಾರಗಳನ್ನು ಪಾಲಿಸುವ ಮೂಲಕ ಸಂಚಾಲಕರು (ಸ್ಥಳೀಯ ಯುವಕರು) ಬೋಧನೆಯನ್ನು ಮಾಡುತ್ತಾರೆ. ಕೋವಿಡ್-19ಕ್ಕೂ ಮುನ್ನ ಈ ಕೇಂದ್ರಗಳನ್ನು *ಕಲಿಕಾ ಚಟುವಟಿಕೆ ಕೇಂದ್ರಗಳು* ಎಂದು ಕರೆಯಲಾಗುತ್ತಿತ್ತು ಮತ್ತು ಅವುಗಳನ್ನು ಶಾಲಾ ಆವರಣದಲ್ಲಿ ನಡೆಸಲಾಗುತ್ತಿತ್ತು.

**ಲೋವಿಸ್ ಸಿಮನ್** ಅವರು ಏಕಲವ್ಯ ಪ್ರತಿಷ್ಠಾನದಲ್ಲಿ ಸಮುದಾಯದ ತೊಡಗಿಸಿಕೊಳ್ಳುವಿಕೆ ಮತ್ತು ಶಿಕ್ಷಣ ಹಾಗು ಶಿಕ್ಷಕರ ಶಿಕ್ಷಣ, ತಲುಪುವಿಕೆ, ವಾದಮಂಡನೆ (ಸಿಇ&ಇ ಮತ್ತು ಟಿಇಓಎ) ಕಾರ್ಯಕ್ರಮಗಳಿಗೆ ಸಂಶೋಧನಾ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಇಂಗ್ಲಿಷ್ ಭಾಷೆಯ ಪಠ್ಯಕ್ರಮ ಮತ್ತು ಅಧ್ಯಾಪನಶಾಸ್ತ್ರದಲ್ಲಿ ತಮ್ಮನ್ನು ತೊಡಿಸಿಕೊಂಡಿದ್ದಾರೆ. ಅವರು ತಮ್ಮ ಎಂಎ ಸ್ನಾತಕೋತ್ತರ ಪದವಿಯನ್ನು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಗಳಿಸಿದ್ದಾರೆ. ಅವರನ್ನು ಸಂಪರ್ಕಿಸಬಹುದಾದ ಇಮೇಲ್ ವಿಳಾಸ: lovis.simon17_mae@apu.edu.in